# ಖನ್ನೂರ ವಿದ್ಯಾನಿಕೇತನ ಸ್ಕೂಲ್, ರಾಣೆಬೆನ್ನೂರ

## ಮೊದಲನೆಯ ಆವರ್ತಕ ಪರೀಕ್ಷೆ ಆಗಸ್ಟ್ – ೨೦೨೦

ತರಗತಿ : ೬ ವಿಷಯ : ದ್ವಿತೀಯ ಭಾಷೆ ಕನ್ನಡ ಅಂಕಗಳು : ೨೦

**(Use KANNADA H W Note Book to ANSWER)**

### ವಿಭಾಗ – ಎ (ವಾಚನ ಮತ್ತು ಗ್ರಹಿಕಾ ಕೌಶಲ) : ೪ ಅಂಕಗಳು

೧. ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

ಕೆ. ಎಸ್. ನಿಸಾರ್ ಅಹಮದ್ ಅವರು ೧೯೩೬ರಲ್ಲಿ ಜನಿಸಿದರು. ಇವರು ಭೂ-ವಿಜ್ಞಾನ ಪ್ರಾಧ್ಯಾಪಕರಾಗಿ ಸರ್ಕಾರಿ ಕಾಲೇಜುಗಳಲ್ಲಿ ಸೇವೆಸಲ್ಲಿಸಿ ಈಗ ನಿವೃತ್ತರಾಗಿದ್ದಾರೆ. ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಇವರು ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಇವರು ಗಡಿಸಲಹಾ ಸಮಿತಿ ಮತ್ತು ಕನ್ನಡ ಕಾವಲು ಸಮಿತಿಗಳಲ್ಲಿಯೂ ಸೇವೆ ಸಲ್ಲಿಸಿದ್ದಾರೆ. 'ಮನಸು ಗಾಂಧಿಬಜಾರು', 'ನೆನೆದವರ ಮನದಲ್ಲಿ', 'ಸುಮುಹೂರ್ತ', 'ಸಂಜೆ ಐದರ ಮಳೆ', 'ಸ್ವಯಂ ಸೇನೆಯ ಗೀತಗಳು', 'ನಾನೆಂಬ ಪರಕೀಯ', 'ನಿತ್ಯೋತ್ಸವ', 'ಅನಾಮಿಕ ಆಂಗ್ಲರು', 'ನವೋಲ್ಲಾಸ' ಮುಂತಾದವು ಇವರ ಕವನ ಸಂಕಲನಗಳು. ಷೇಕ್ಸ್‌ಪಿಯರನ ಎರಡು ನಾಟಕಗಳನ್ನೂ, ಕೆಲ ರಷ್ಯನ್ ಕವಿತೆಗಳನ್ನೂ ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಇವರ ಮಕ್ಕಳ ಪುಸ್ತಕ 'ಹಕ್ಕಿಗಳು' ರಾಷ್ಟ್ರೀಯ ಬಹುಮಾನ ಪಡೆದಿದೆ. ಇವರು 'ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ' ಮತ್ತು 'ರಾಜ್ಯೋತ್ಸವ ಪ್ರಶಸ್ತಿ'ಗಳನ್ನೂ ಸಹ ಪಡೆದಿದ್ದಾರೆ. ಇವರು ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವದ ಕವಿಗೋಷ್ಠಿಯ ಅಧ್ಯಕ್ಷರಾಗಿದ್ದರು.

ಪ್ರಶ್ನೆಗಳು:
- ೧) ಕೆ. ಎಸ್. ನಿಸಾರ್ ಅಹಮದ್ ಅವರು ಯಾವ ವಿಷಯದ ಪ್ರಾಧ್ಯಾಪಕರಾಗಿದ್ದರು? ೧
- ೨) ಕೆ. ಎಸ್. ನಿಸಾರ್ ಅಹಮದ್ ಅವರ ರಾಷ್ಟ್ರೀಯ ಬಹುಮಾನ ಪಡೆದ ಮಕ್ಕಳ ಪುಸ್ತಕ ಯಾವುದು? ೧
- ೩) ಕೆ. ಎಸ್. ನಿಸಾರ್ ಅಹಮದ್ ಅವರು ಪಡೆದ ಎರಡು ಪ್ರಶಸ್ತಿಗಳು ಯಾವುವು? ೧
- ೪) ಜನನ- ಪದದ ವಿರುದ್ಧ ಪದ ಯಾವುದು? ೧

### ವಿಭಾಗ –ಬಿ (ಬರವಣಿಗೆಯ ಕೌಶಲ) : ೩ ಅಂಕಗಳು

೨) ನಿಮ್ಮ ನಗರವನ್ನು ಕೊರೋನಾದಿಂದ ರಕ್ಷಿಸಿಕೊಳ್ಳಲು ಸೂಕ್ತ ವ್ಯವಸ್ಥೆ ಮಾಡುವಂತೆ ನಿಮ್ಮ ನಗರ ಸಭೆ ಅಧ್ಯಕ್ಷರಿಗೆ ಪತ್ರ ಬರೆಯಿರಿ: ೩

### ವಿಭಾಗ – ಸಿ (ಅನ್ವಯಿಕ ವ್ಯಾಕರಣ) : ೬ ಅಂಕಗಳು

೩) ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ:

೧) ಈ ಪದಗಳನ್ನು ಬಿಡಿಸಿ, ಸಂಧಿಯ ಹೆಸರು ತಿಳಿಸಿ: ೪

೧) ದೇವಾಲಯ ೨) ಚಳಿಯಿಂದ ೩) ಗುರುವನ್ನು ೪) ಅಲ್ಲೊಬ್ಬ

೨) ಈ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ: ೧

೧) ಹತ್ತಿರ ೨) ಸಾಧ್ಯ

೩) ಈ ಪದಗಳ ವಚನ ಬದಲಿಸಿ ಬರೆಯಿರಿ: ೧

೧) ಹುಡುಗ ೨) ಹಣ್ಣು

### ವಿಭಾಗ – ಡಿ (ಪಠ್ಯಗಳ ಅಧ್ಯಯನ) : ೭ ಅಂಕಗಳು

೪) ಕೊಟ್ಟಿರುವ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:
- ೧) ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿದ್ದವು? ೧
- ೨) ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು? ೧
- ೩) ಏನನ್ನು ತೊರೆದು ಬಾಳಬೇಕು? ೧

೫) ಕೊಟ್ಟಿರುವ ಪ್ರತಿಯೊಂದು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ:
- ೧) ಪಾರಿವಾಳಗಳ ಆನಂದಕ್ಕೆ ಕಾರಣವೇನು? ೨
- ೨) ಬೇಡ ಏನು ಮಾಡಿದನು? ೨

*****

**SEND THE PHOTO or PDF of this ANSWER SHEET to HANUMANTAPPA M K Sir on 8197183534 or 8660443218**